# ಪಟ್ಟಾಯ! 3ಡಿ ನೋಟ



ಥಾಯ್ಲೆಂಡ್‌ನ ಪಟ್ಟಾಯ ಸುಂದರ ಸ್ವಪ್ನಗಳಿಗೆ, ಶೃಂಗಾರದ ಬಿಂಬಗಳಿಗೆ ಹೆಸರು. 'ಆರ್ಟ್ ಆಫ್ ಪ್ಯಾರಡೈಸ್' ಕೂಡ ಪ್ರಸಿದ್ಧಿ. ಅಲ್ಲಿನ '3 ಡಿ' ತಂತ್ರಜ್ಞಾನದ ಮಾಂತ್ರಿಕ ಚಿತ್ರಗಳು ನೋಡುಗರನ್ನು ತಬ್ಬಿಬ್ಬುಗೊಳಿಸುವಂತಿವೆ.

■ ಚಿತ್ರ–ಬರಹ: **ಎಸ್.ಎಂ. ಜಂಬುಕೇಶ್ವರ**

ಥಾಯ್ಲೆಂಡ್ – ಅದರಲ್ಲೂ ಪಟ್ಟಾಯ ಎಂದಕೂಡಲೇ ರಸಿಕರ ಕಲ್ಪನೆಗಳು ಗರಿಗೆದರುತ್ತವೆ. ಭೋಗಭೂಮಿಯಂತೆ ಒಂದು ನೋಟಕ್ಕೆ ಕಾಣುವ ಪಟ್ಟಾಯ ಕಲಾನಗರಿಯೂ ಹೌದು. ಶೃಂಗಾರವೂ ಒಂದು ಕಲೆ ಎಂದು ಮತ್ತೆ ಕಲ್ಪಿಸಿಕೊಳ್ಳಬೇಡಿ. ಈಗ ಹೇಳುತ್ತಿರುವುದು ಚಿತ್ರಕಲೆಯ ಬಗ್ಗೆ!

'ಆರ್ಟ್ ಆಫ್ ಪ್ಯಾರಡೈಸ್' ಹೆಸರಿನ ಕಲಾ ಸಂಗ್ರಹಾಲಯ ಪಟ್ಟಾಯಕ್ಕೆ ಭೇಟಿ ನೀಡುವ ಪ್ರವಾಸಿಗರೆಲ್ಲ ನೋಡಲೇಬೇಕಾದ ತಾಣ. ಮುಖ್ಯವಾಗಿ ಕಲಾವಿದರು ಹಾಗೂ ಕಲೆಯಲ್ಲಿ ಆಸಕ್ತಿಯುಳ್ಳವರು ಭೇಟಿ ನೀಡಲೇಬೇಕಾದ ಸ್ಥಳವಿದು.

ಪಟ್ಟಾಯ ನಗರದ ಕೋರಲ್ ಐಲ್ಯಾಂಡ್‌ಗೆ ಭೇಟಿ ನೀಡಿದ ನಾವು 'ಆರ್ಟ್ ಆಫ್ ಪ್ಯಾರಡೈಸ್' ಸಂಗ್ರಹಾಲಯ ವೀಕ್ಷಿಸಲು ಹೊರಟಾಗ ರಾತ್ರಿ ಇರುಳು ಆವರಿಸಿತ್ತು. ಇದೂ ಇನ್ನೊಂದು ಸಂಗ್ರಹಾಲಯ ಎಂದು ಭಾವಿಸುತ್ತಲೇ ಟಿಕೆಟ್ ಪಡೆದು ಒಳಹೊಕ್ಕಾಗ ಸ್ವಾಗತಿಸಿದ್ದು ಕಲಾಸೊಬಗಿನ ಹೊಸಜಗತ್ತು.

ಗೋಡೆ, ಸೀಲಿಂಗ್, ನೆಲ – ಸಂಗ್ರಹಾಲಯದಲ್ಲಿನ ಎಲ್ಲವೂ ಅಲ್ಲಿ ಕ್ಯಾನ್ವಾಸ್ ಆಗಿತ್ತು. ಸ್ವತಃ ಚಿತ್ರಕಲಾವಿದರಿಗೂ ಸಹ ಒಂದು ರೀತಿಯ ಬೆರಗು ಮೂಡಿಸುವ, ತಬ್ಬಿಬ್ಬುಗೊಳಿಸುವ ಸನ್ನಿವೇಶ ಅಲ್ಲಿನದು. ಎಲ್ಲ ಚಿತ್ರಗಳು '3 ಡಿ' ಆಯಾಮದಲ್ಲಿಯೇ ಇರುವುದು ವಿಶೇಷ.